

ಸಾವು ಕಾಣದ ಮನೆ
ಚಿತ್ರಗಳು : ರಾಮಗೌತಮ
ಕಿಸಾಗೋತಮಿ ಎಂಬುವಳ ಗಂಡು ಮಗು ಸತ್ತು ಹೋಯಿತು. ಅವಳು ತನ್ನ ಮಗನ ಶವವನ್ನು ಎತ್ತಿಕೊಂಡು ಬುದ್ಧನೆಡೆಗೆ ಅಳುತ್ತ ಬಂದಳು.
ಪೂಜ್ಯರೇ, ದಯವಿಟ್ಟು ನನ್ನ ಮಗನ ಪ್ರಾಣವನ್ನು ಉಳಿಸಿ.
ಮಗಳೇ, ಸಾವು ಕಾಣದ ಮನೆಯಿಂದ ಒಂದು ಹಿಡಿ ಸಾಸಿವೆ ತೆಗೆದುಕೊಂಡು ಬಾ.
ಕಿಸಾಗೋತಮಿ ಹುಡುಕಲು ಹೊರಟಳು.
ಅಮ್ಮಾ, ನಿಮ್ಮ ಮನೆಯಲ್ಲಿ ಇದುವರೆಗೆ ಯಾರೂ ಸಾಯದಿದ್ದರೆ ಸ್ವಲ್ಪ ಸಾಸಿವೆ ಕೊಡುವಿರಾ?
ಅಯ್ಯೋ, ಬದುಕಿರುವವರಿಗಿಂತ ಹಿಂದೆ ಸತ್ತವರ ಸಂಖ್ಯೆಯೇ ಹೆಚ್ಚು.
ಎಲ್ಲಾ ಮನೆಯಲ್ಲೂ ಒಂದೇ ಉತ್ತರ
ಮಗಳೇ ಸಾಸಿವೆ ಸಿಕ್ಕಿತೆ ?
ಪೂಜ್ಯರೇ, ಸಾವಿಲ್ಲದ ಮನೆ ಯಾವುದೂ ಸಿಗಲಿಲ್ಲ.
ಮಗಳೇ, ಈ ಜಗತ್ತಿನಲ್ಲಿ ದುಃಖ ಸಾಮಾನ್ಯ. ಸಾವು ನೋವುಗಳು ಈ ಜಗತ್ತಿನಲ್ಲಿ ಎಲ್ಲಾ ಕಡೆಯಲ್ಲಿಯೂ ಇದ್ದೇ ಇರುತ್ತವೆ. ನಾವು ಅದನ್ನು ಸಹಿಸಿಕೊಂಡು ಶಾಂತಿಯಿಂದ ಬಾಳುವುದನ್ನು ಕಲಿಯಬೇಕು.
ಸಾವಿನ ಅನಿವಾರ್ಯತೆಯನ್ನು ಅರಿತ ಕಿಸಾ ಗೋತಮಿ ಬುದ್ಧನಲ್ಲಿ ಮತ್ತು ಅವನ ಧರ್ಮದಲ್ಲಿ ಶರಣಾದಳು.